# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 245/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಅಮೃತ್ | | ***ಪ್ರಮಾಣ ಮಾಡಿಸಿದ ದಿನಾಂಕಃ*** |
| **ತಂದೆ/ಗಂಡನ ಹೆಸರು** | ಃ ರಂಗರಾವ್ ಗಂಗಾದರ | | **21.12.2024** |
| **ವಯಸ್ಸು** | ಃ **26 ವರ್ಷ** | | |
| **ವೃತ್ತಿ** | ಃ ಡ್ರೈವರ್ | | **ಪ್ರಾ.ಸಾ. ಃ 5** |
| **ವಾಸಸ್ಥಳ** | ಃ ನಿಂಗಯ್ಯನ ಕೆರೆ | | **ಚಾ.ಸಾ. ಃ 4** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ದಿಃ *16.03.2023* ರಂದು ಮೇಟಗಳ್ಳಿ ಪೊಲೀಸ್ ಠಾಣೆ ಪೊಲೀಸರು ನನಗೆ ಮಹಜರ್ ಗೆ ಬರುವಂತೆ ನೋಟೀಸ್ ಕೊಟ್ಟಿದ್ದರು. ನನ್ನನ್ನು ಮತ್ತು ನಂಜುಂಡಸ್ವಾಮಿಯನ್ನು ಚಂದನ್ ರವರ ಮನೆ ಬಳಿ ಕರೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ಚಂದನ್ ಇವರು ಇದೇ ಸ್ಥಳದಲ್ಲಿ ನನಗೆ ಆದಿತ್ಯಗೌಡ ಚಾಕುವಿನಿಂದ ಚುಚ್ಚಿದ್ದು ಎಂದು ಹೇಳಿದ್ದರು. ಮತ್ತು ಆ ಕಾಲಕ್ಕೆ ತಾನು ಘಟನೆ ಕಾಲಕ್ಕೆ ಧರಿಸಿದ್ದ ಟೀ ಶರ್ಟನ್ನು ಹಾಜರುಪಡಿಸಿದರು. ಆ ಕಾಲಕ್ಕೆ ಮಹಜರ್ ಮಾಡಿ ನನ್ನ ಸಹಿ ಪಡೆದಿದ್ದರು. ಈಗ ನಾನು ನೋಡುತ್ತಿರುವ ನಿಪಿ *4* ಆ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿಪಿ *4(ಬಿ)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಮು.ಮಾ *1* ಶರ್ಟು ಆ ದಿನ ಚಂದನ ಇವರು ಹಾಜರುಪಡಿಸಿದ ಶರ್ಟು ಆಗಿದೆ. ಮು.ಮಾ *1* ಶರ್ಟಿಗೆ ರಕ್ತದ ಕಲೆ ಆಗಿತ್ತು ಮತ್ತು ತೂತು ಆಗಿತ್ತು. ಆ ಕಾಲಕ್ಕೆ ನಿಪಿ *5* ಮತ್ತು *6* ರಲ್ಲಿ ಗುರುತಿಸಿರುವ ಫೋಟೋಗಳನ್ನು ತೆಗೆದಿದ್ದರು. ನಂತರ

ಕುಂಬಾರಕೊಪ್ಪಲು *4* ನೇ ಕ್ರಾಸ್ ನಲ್ಲಿರುವ ನರಸಿಂಹ ಇವರ ನಿರ್ಮಾಣ ಹಂತದ ಕಟ್ಟಡದ ಬಳಿ ಎಸೆದಿದ್ದ ಚಾಕುವನ್ನು ಕೋರ್ಟು ಮುಂದಿರುವ ಆರೋಪಿತ ತೋರಿಸಿದ್ದ. ಅದನ್ನು ಆರೋಪಿತನೇ ತೆಗೆದು ಹಾಜರುಪಡಿಸಿದ್ದ. ಆ ಚಾಕುವನ್ನು ಜಪ್ತಿ ಮಾಡಿ ಮಹಜರ್ ಮಾಡಿದ್ದರು. ಆ ಚಾಕುವಿಗೆ ಡ್ರ್ರಾಗರ್ ಎಂದು ಸಹ ಕರೆಯುತ್ತಾರೆ. ಮು.ಮಾ *2* ಆ ಚಾಕು ಇರುತ್ತದೆ. ಆರೋಪಿತ ಅದರಿಂದಲೇ ತಾನು ಚಂದನ ಇವರಿಗೆ ಚುಚ್ಚಿದ್ದು ಎಂದು ಹೇಳಿದ. ಈಗ ನಾನು ನೋಡುತ್ತಿರುವ ಮಹಜರ್ ಆ ಕಾಲಕ್ಕೆ ಮಾಡಿದ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರ್ ನ್ನು ನಿಪಿ *13* ಸಹಿಯನ್ನು ನಿಪಿ *13(ಎ)* ಎಂದು ಗುರುತಿಸಿದೆ. ಕೋರ್ಟು ಮುಂದಿರುವ ಆರೋಪಿತನೇ ಆ ದಿನ ಚಾಕು ಹಾಜರುಪಡಿಸಿರುತ್ತಾನೆ. ಈಗ ನಾನು ನೋಡುತ್ತಿರುವ ಫೋಟೋಗಳನ್ನು ಚಾಕು ಹಾಜರುಪಡಿಸಿದ ತೆಗೆದಿದೆ. ಸದರಿ ಫೋಟೋಗಳನ್ನು ನಿಪಿ *14* ರಿಂದ *16* ಎಂದು ಗುರುತಿಸಿದೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲ**ರ ಗೈರು ಹಾಜರಿದ್ದು ಆರೋಪಿ ಸಮಯ ಕೋರಿದ್ದು ಸೂಕ್ತ ಕಾರಣ ಇಲ್ಲದಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*